ಮೈಸೂರ ಗೆಜೆಟ್.

ನಂ. 44.] ಸರ್ಕಾರದಿಂದ ಪ್ರಾಮುಖ್ಯ ಆದ್ದು. [ನಂ. 22.

ಬೆಂಗಳೂರು, ಗುರುವಾರ, ಜೂನ್ ತಾ॥ 3, ಸನ್ 1909.

II ನೆ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗೈರೆಯವರಿಂದ ಕೊಡೋಣದ ಇಸ್ತಿಹಾರ್‌ನಾಮೆಗಳು.

ಫೈನ್ಯಾನ್ಷಿಯಲ್ ಇಲಾಖೆ.

ತಾರೀಖು 26ನೆ ಫೆಬ್ರವರಿ 1909.

1909ನೆ ಇಸವಿ ಏಪ್ರೆಲ್ 1ನೆ ತಾರೀಖು ಲಾಗಾಯಿತು 1909ನೆ ಇಸವಿ ಜೂನ್ 30ರ ವರಿಗೆ ಕೆಳಗೆ ನಮೂದಿಸಿರುವ ಖಜಾನೆಗಳ ಮೇಲೆ ಹುಂಡಿಗಳಿಗೆ (Supply Bills) ಅಪ್ಲಿಕೇಷ್ಟಗಳನ್ನು ಮೈಸೂರು ಸೀಮೆಯ ಶ್ರೀಮಂತ ಮಹಾರಾಜರವರ ಸರ್ಕಾರದ ಕಂಟ್ರೋಲರು ತೆಗೆದುಕೊಳ್ಳುತ್ತಾರೆ. ಪ್ರತಿಯೊಂದು ಅಪ್ಲಿಕೇಷನ್ನಲ್ಲಿಯೂ ಈ ಕೆಳಗೆ ತೋರಿಸಿರುವ ವಿವರಗಳು ಇರಬೇಕು.

1. ಹುಂಡಿ ಮೊಬಲಗು.
2. ಹಣ ಪಾವತಿಯಾಗಬೇಕಾದ ಖಜಾನೆಯ ಹೆಸರು.

ಮತ್ತು 3. ಹುಂಡಿಗೆ ಅಪ್ಲಿಕೇಷ್ಟ ಹಾಕುವವರ ಹೆಸರು ಮತ್ತು ವಿಳಾಸ.

2. 500 ರೂಪಾಯಿಗಳಿಗಿಂತ ಕಡಿಮೆ ಮೊಬಲಗಿಗೆ ಹುಂಡಿಯು ಕೊಡಲ್ಪಡುವದಿಲ್ಲ.

3. ಅಪ್ಲಿಕೇಷನ್ನನ್ನು ಅಂಗೀಕರಿಸುವ ಪಕ್ಷದಲ್ಲಿ ಆ ವಿಚಾರವು ಅಪ್ಲಿಕೇಷ್ಟ ಹಾಕಿರುವವರಿಗೆ ತಿಳಿಸಲ್ಪಡುವದಲ್ಲದೆ, ಸ್ಟೇಟ್ ಹುಜೂರು ಟ್ರೆಜರಿ ಆಫಿಸರಿಗೆ ಹುಂಡಿಯ ಮೊಬಲಗನ್ನು ಮತ್ತು ಕೆಳಗೆ ನಮೂದಿಸಿರುವ ದರದಮೇರೆ ಕಮಿಷನನ್ನೂ ತೆಗದು ಕೊಂಡು ಹುಂಡಿಯನ್ನು ಕೊಡುವದಕ್ಕೆ ಅಧಿಕಾರವು ಕೊಡಲ್ಪಡುತ್ತದೆ.

ಹುಂಡಿ ಕೊಡುವ ಖಜಾನೆ ಹೆಸರು.	ಹಣ ಪಾವತಿಯಾಗಬೇಕಾದ ಖಜಾನೆ ಹೆಸರು.	ಕಮಿಷ್ಟ ದರ.
ಸ್ಟೇಟ್ ಹುಜೂರ್.	ಕೋಲಾರ. ತುಮಕೂರು. ಶಿವಮೊಗ್ಗ. ಕಡೂರು. ಚಿತ್ರದುರ್ಗ. ಮೈಸೂರು. ಹಾಸನ.	ಕೈಕಡ $\frac{1}{16}$

ಜೆ. ಎಸ್. ಚಕ್ರವರ್ತಿ,
ಕಂಟ್ರೋಲರ್.